**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 948/2016

CW -1 PW - 1

| | | |
|---|---|---|
| ಹೆಸರು | ಃ | ಬೈರಯ್ಯ |
| ತಂದೆಯ ಹೆಸರು | ಃ | ಸಿದ್ದಯ್ಯ |
| ವಯಸ್ಸು | ಃ | 64 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಗೊಲ್ಲರದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 06.12.2023

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಚಾಸಾ-3 ರವರು ಗೊತ್ತು ಅವರು ಈಗ ತೀರಿಕೊಂಡಿರುತ್ತಾರೆ. ಚಾಸಾ-2 ರವರು ಗೊತ್ತು. ಮೃತ ಕದರಮ್ಮ ರವರು ಗೊತ್ತು.

ಸದರಿ ಅಪಘಾತವು ಹೇಗೆ, ಯಾವ ರೀತಿ, ಯಾವ ವಾಹನದಿಂದ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂಬುದು ನನಗೆ ತಿಳಿದಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುಲ್ಲ. ನನಗೆ ಸದರಿ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸಾಕ್ಷಿ ದಿಃ21.05.2015 ಮತ್ತು ದಿಃ25.05.2015 ದೂರುಗಳು ಮತ್ತು ಮಹಜರ್ ನಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ದೂರಗಳನ್ನು ಕ್ರಮವಾಗಿ ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಮತ್ತು ನಿಪಿ-2, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಮಹಜರ್ ಅನ್ನು ನಿಪಿ-3 ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 13.05.2015 ರಂದು ಕೊಂಟಕೆರೆದೊಡ್ಡಿ ಗ್ರಾಮದಲ್ಲಿ ಊರ ಹಬ್ಬ ಇದ್ದ ಕಾರಣ ನಾನು ಕದರಮ್ಮನವರ ಮನೆಗೆ ಹಬ್ಬಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಆಗ ಆರೋಪಿ ಸಹ ತನ್ನ ಕೆಎ-05-ಜೆವಿ-7691 ರ ದ್ವಿಚಕ್ರ ವಾಹನದಲ್ಲಿ ಹಬ್ಬಕ್ಕೆ ಬಂದಿದ್ದ ಎಂದರೆ ಸರಿಯಲ್ಲ. ಹಬ್ಬದ ಊಟ ಮುಗಿಸಿಕೊಂಡು ಆರೋಪಿ ಸಂಜೆ 6.30 ಗಂಟೆ ಸಮಯದಲ್ಲಿ ಊರಿಗೆ ಹೋಗಲು ಗಾಡಿ ಶುರು ಮಾಡಿಕೊಂಡು ಊರಿಗೆ ಹೊರಡುವಾಗ ಕದರಮ್ಮನವರು ಮನೆಯ ಹತ್ತಿರ ನಿಂತಿರುವಾಗ, ಆರೋಪಿ ಗಾಡಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿ ಗುದ್ದಿದ ಪರಿಣಾಮ ಕದರಮ್ಮನವರು ಕೆಳಗೆ ಬಿದ್ದು ತಲೆಗೆ ಏಟಾಗಿ ಆಂಬ್ಯುಲೆನ್ಸ ಮುಖಾಂತರ ಕನಕಪುರಕ್ಕೆ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ದಾಖಲು ಮಾಡಲಾಯಿತು ಎಂದರೆ ಸರಿಯಲ್ಲ. ದಿಃ24.05.2015 ರಂದು ಸಂಜೆ 4 ಗಂಟೆ ಸಮಯದಲ್ಲಿ ಕದರಮ್ಮರವರು ಕೆಂಪೇಗೌಡ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆಂದರೆ ಸರಿಯಲ್ಲ. ಈ ರೀತಿ ಪೋಲೀಸರ ಮುಂದೆ ದೂರನ್ನು ನೀಡಿದ್ದೇನೆಂದರೆ ಸರಿಯಲ್ಲ.

ದಿಃ21.05.2015 ರಂದು ಪೋಲೀಸರು ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ವಕೀಲರಿಂದಃ</u>**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ